"ಅಯ್ಯಾ, ಅವರು ಹೊರಟು ಹೋಗಿ ನಾಲ್ಕು ದಿವಸವಾಯ್ತು... ಎಲ್ಲಿಗೆಂದೂ ಹೇಳಲಿಲ್ಲ... ಯಾಕೋ ಬಾಳಾ ಬೇಜಾರಲ್ಲಿದ್ದರು. ಅಮ್ಮನಿಗೆ ಗೊತ್ತಿರಲಿಕ್ಕೆ ಸಾಕು..." ಎಂದು ಸುಮ್ಮನಾದ.

ವಾಸುದೇವರಿಗೆ ಕ್ಷಣಾರ್ಧದಲ್ಲೀಗ ಎಲ್ಲವೂ ನಿಚ್ಚಳವಾಗಿ ಹೋಯಿತು!

'ಛೇ ಇಂಥದೊಂದು ಕೃತ್ಯಕ್ಕೆ ಅಮ್ಮ ಕೈ ಹಾಕುತ್ತಾರೆ ಎಂಬ ಸುಳಿವೇನಾದರೂ ಮೊದಲೇ ತನಗೆ ಸಿಕ್ಕಿರುತ್ತಿದ್ದರೆ ತಿರುಗಾಟಕ್ಕೆ ಹೋಗುತ್ತಲೇ ಇರಲಿಲ್ಲ ತಾನು! ಅಮ್ಮ ತನ್ನ ಗೈರಲ್ಲಿ ಹೀಗೆ ಮಾಡಿ ಎರಡು ನಿಷ್ಪಾಪ ಜೀವಿಗಳು ಬೀದಿಪಾಲಾಗುವಂತೆ ಮಾಡಿಬಿಟ್ಟರಲ್ಲ?! 'ನನಗೇನಾರ ಆಗ್ಲಿ ಅಯ್ಯ. ನೀವು ಯಾವಾಗ್ಲೂ ಸುಖದಲ್ಲಿರಬೇಕು...' ಎಂದು ತನ್ನ ಪ್ರಾಂಜಲ ಪ್ರೇಮದಿಂದ ತನ್ನ ಅಂತರಂಗದ ಅಶಾಂತಿಗೆ ತಂಪು ನೀಡುತ್ತಿದ್ದ ದೇವಿ ಇನ್ನು ತನ್ನ ಪಾಲಿಗಿಲ್ಲ! ಮತ್ತದೇ ಖಾಲಿತನದ, ಸಾಂಗತ್ಯವಿಲ್ಲದ ಒಂಟಿ ಜೀವನ... ಇನ್ನು ಅಮ್ಮನಲ್ಲಿ ಈ ಬಗ್ಗೆ ವಿಚಾರಿಸುವುದೆಂದರೆ ಮತ್ತಷ್ಟು ಬೇಸರವನ್ನು, ದುಗುಡವನ್ನು ಆಹ್ವಾನಿಸಿದಂತೆಯೇ ಆಗುತ್ತದೆ ಎಂದುಕೊಂಡ ವಾಸುದೇವರು ವಿಷಣ್ಣರಾಗಿ ಅಲ್ಲಿಂದ ಮನೆಗೆ ಮರಳಿದರು.

ತದನಂತರ ವಾಸುದೇವರು ದಿನದಿನಕ್ಕೂ ಅಂತರ್ಮುಖಿಯಾಗುತ್ತಾ ನಿರ್ಲಿಪ್ತರಾಗಿ ಬದುಕುಲಾರಂಭಿಸಿದರು.

'ದೇವಿ ಕಣ್ಣೆದುರಿಂದ ದೂರಾದರೆ ಎಲ್ಲವೂ ಕ್ರಮೇಣ ಸರಿದಾರಿಗೆ ಮರಳುತ್ತದೆ ಮತ್ತು ಮಗನ ಮದುವೆ ಯತ್ನಕ್ಕೂ ಸುಲಭವಾಗುತ್ತದೆ' ಎಂದುಕೊಂಡಿದ್ದ ವಾಸುದೇವರ ಅಮ್ಮ, ಈ ಬೆಳವಣಿಗೆಯಿಂದ ಕಂಗಾಲಾದರು. ದೇವಿ ಮತ್ತು ಸೋಮನ ನಿರ್ಗಮನದ ಕುರಿತು ತನ್ನಲ್ಲಿ ಮಗ ವಿಚಾರಿಸಬಹುದು ಎಂದುಕೊಂಡಿದ್ದ ಅವರಿಗೆ ಮಗನ ಈ ಕಟುಮೌನ ಮತ್ತು ಖಿನ್ನತೆ ದಿಕ್ಕುಗಾಣದಂತೆ ಮಾಡಿತು. "ಯಾಕೆ ವಾಸೂ... ನಾನು ಜೀವಂತವಿದ್ದೂ ಯಾಕೆ ತಾಯಿ ಸತ್ತವನಂತೆ ಇರುತ್ತಿ ನೀನು? ಹೀಗೆ ಮುಂದುವರಿದರೆ ನಾನು ಬಾವಿಗೆ ಹಾರಿ ಪ್ರಾಣ ಕಳಕೊಳ್ತೇನೆ ನೋಡು" ಎಂದು ಮಗನಲ್ಲಿ ಭಯ ಹುಟ್ಟಿಸುವ ಯತ್ನ ಮಾಡಿಯೂ ಅವರು ನೋಡಿದರು. "ಏನಾಯ್ತಮ್ಮ ಈಗ? ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆಯಲ್ಲ?" ಎಂದು ತಣ್ಣನೆಯ ಧ್ವನಿಯಲ್ಲಿ ತಾಯಿಯನ್ನು ಸಂತೈಸುತ್ತಾ, ಅವರು ಮತ್ತೆ ತನ್ನ ಪಾಡಿಗೆ ತಾನು ಎಂದಿನಂತೆ ನಿರ್ಲಿಪ್ತರಾಗಿ ಉಳಿದುಬಿಟ್ಟರು.

ಕಾಲಚಕ್ರ ಅದರ ಪಾಡಿಗೆ ಅದು ಉರುಳುತ್ತಾ ಹೋಯಿತು.

ಕೊನೆಗೂ ತನ್ನ ಏಕಮಾತ್ರ ಮಗನ ಮದುವೆ ಕಾಣದೆ 'ವಂಶ ಇಲ್ಲಿಗೇ ಕೊನೆಯಾಗುತ್ತದೆ' ಎನ್ನುವ ಕೊರಗಿನಲ್ಲಿಯೇ ವಾಸುದೇವರ ಅಮ್ಮ ಇಹಲೋಕದ ಯಾತ್ರೆ ಮುಗಿಸಿದರು.

★★★

ವಾಸುದೇವರಿಗೀಗ ಅರವತ್ತರ ಆಸುಪಾಸು.

ತನ್ನ ತಂದೆಯೇ ಬೆಳೆಸಿದ ತೋಟದ ದೊಡ್ಡ ಮನೆಯಲ್ಲಿ ಮೌನತೀರದ ಏಕಾಂಗಿ ಸಂತನಂತೆ ಕೃಷಿ, ಸಮಾಜಸೇವೆ, ಅಧ್ಯಾತ್ಮ ಚಿಂತನೆ ಮಾಡುತ್ತಾ ಅವರು ಬದುಕು ಸವೆಸುತ್ತಿದ್ದರು. ಊರ ಜನರು ಅವರನ್ನು 'ದೊಡ್ಮನೆ ವಾಸುಸ್ವಾಮಿ'ಗಳೆಂದೇ ಗುರುತಿಸಿ ಗೌರವಿಸುತ್ತಿದ್ದರು,

ಹೀಗಿರುತ್ತಾ–

ಇತ್ತೀಚೆಗೆ ತೀವ್ರ ಎದೆನೋವಿಗೆ ತುತ್ತಾದ ಅವರು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಹೃದಯ ಚಿಕಿತ್ಸೆಗೊಳಗಾಗಬೇಕಾಗಿ ಬಂದಿತು. ಇಲ್ಲಿಯೇ ತನ್ನ ಬದುಕಿನ ಇನ್ನೊಂದು ತಿರುವು ಎದುರಾಗುತ್ತದೆ ಎಂಬುದು ಅವರ ಕಲ್ಪನೆಯಲ್ಲೂ ಸುಳಿದಿರಲಿಲ್ಲ!